# ಸಮಕಾಲೀನ ಮಹಾಕರುಣಿ ಬುದ್ಧ

ಕೆ.ಎಲ್. ಪದ್ಮಿನಿ

ಜಗತ್ತು ಕಂಡ ಮಹಾಪುರುಷರಲ್ಲಿ ಉಜ್ವಲವಾಗಿ ಬೆಳಗುವ ವ್ಯಕ್ತಿತ್ವವೇ ಭಗವಾನ್ ಬುದ್ಧ. ಸಹಸ್ರಾರು ವರ್ಷಗಳ ನಂತರವೂ ಬುದ್ಧನ ಜೀವನ, ತತ್ತ್ವಗಳಿಂದ ಪ್ರಭಾವಿತರಾಗದವರಿಲ್ಲ. ಅವನ ಜೀವನ, ಸಾಧನೆ, ತತ್ತ್ವಗಳ ಬಗ್ಗೆ ಇಲ್ಲಿ ವಿಶ್ಲೇಷಿಸಿರುವ ಲೇಖಕಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕಿಯಾಗಿದ್ದರು; ಹಾಗೂ ಹೊಳಲ್ಕೆರೆಯ ಕಾಲೇಜೊಂದರಲ್ಲಿ ಪ್ರಾಚಾರ್ಯರಾಗಿ ನಿವೃತ್ತರಾದವರು. ಉತ್ತಮ ವಾಗ್ಮಿ, ಚಿಂತಕಿ ಹಾಗೂ ಲೇಖಕಿಯಾಗಿರುವ ಅವರು ಪ್ರಸ್ತುತ ಮೈಸೂರು ನಿವಾಸಿಗಳಾಗಿದ್ದಾರೆ.

## ಬುದ್ಧ

ಬುದ್ಧ ಮಹಾಮೌನಕ್ಕೆ ಮತ್ತು ಮಹಾ ಕರುಣೆಗೆ ಹೆಸರಾದವನು. ಬೌದ್ಧಧರ್ಮದಲ್ಲಿ ಬುದ್ಧ ಮತ್ತು ಆತ ಪಡೆದ ಬುದ್ಧತ್ವ ಎರಡೂ ಕರುಣೆಯ ಪ್ರತೀಕ ಮತ್ತು ನಿತ್ಯಸತ್ಯ. ಬುದ್ಧನ ಬೋಧನೆಯಲ್ಲಿ ಅವನ ಜನ್ಮಾಂತರದ ಕಥೆಗಳಿಗೆ ವಿಶೇಷ ಸ್ಥಾನ. ಆ ಕತೆಗಳಲ್ಲಿ ಬುದ್ಧ ಯಾವುದೇ ಜನ್ಮದಲ್ಲಿರಲಿ ಅವನು ಇತರರು ತನ್ನ ಹಾಗೆಯೇ ಎಂದು ಭಾವಿಸಿ ಅವರ ಸೌಖ್ಯಕ್ಕಾಗಿ ಯಾವುದೇ ಲಾಭ ನಷ್ಟ ಇತ್ಯಾದಿಗಳ ಸೋಂಕಿಲ್ಲದ ಪ್ರೀತಿ ಮತ್ತು ತ್ಯಾಗ ಮನೋಭಾವನೆಯನ್ನು, ಸಂಯಮ ಮತ್ತು ವ್ರತದಂತಹ ನಡೆಯನ್ನು ತೋರುವವನು ಆಗಿರುತ್ತಿದ್ದ. ಆ ಮೂಲಕ ಪರಿಪೂರ್ಣ–ಪ್ರೀತಿ ಮತ್ತು ದಯೆಗಳ ಬುದ್ಧತ್ವವನ್ನು ಒಬ್ಬ ಪಡೆಯುವುದು ಇರುವವರೆಲ್ಲರ ಒಳಿತನ್ನು ಮಿತಿರಹಿತವಾಗಿ ವಿಸ್ತರಿಸುವುದಕ್ಕಾಗಿ; ಸಾರ್ಥಕ ಪ್ರಾಪಂಚಿಕ ಬದುಕಿನ ಉದ್ದೇಶವೂ ಸಹ ಅಸಂಖ್ಯಾತವಾಗಿ ಇರುವ ಜೀವಿಗಳ ಸೇವೆಯೇ ಎಂದು ಹೇಳುತ್ತಿದ್ದ.

ಬುದ್ಧ ಬೋಧಿಸುವಾಗ ತಾನು ಹೇಳಿದುದು ಎಂದು ಮಾರ್ಗದರ್ಶನ ಮಾಡದೆ ತಥಾಗತನನ್ನು ಕರ್ತೃವನ್ನಾಗಿಸಿಕೊಳ್ಳುತ್ತಿದ್ದ. ತಥಾಗತ ಎನ್ನುವುದರ ಶಬ್ದಾರ್ಥ 'ಹೀಗೆ ಬಂದವನು' ಎಂದು. ಇದರ ಸೂಚ್ಯಾರ್ಥ ತಥಾಗತನು ಎಲ್ಲರೂ 'ಬಂದು ಹೋಗುವ' ಹಾಗೆ ಬಂದವನು ಅಲ್ಲ; ನಿರ್ದಿಷ್ಟವಾದ, ಸೂಕ್ತವಾದ, ಅತ್ಯಾವಶ್ಯಕವಾಗಿ ಹೋಗಲೇಬೇಕಾದ ದಾರಿಯಲ್ಲಿ ಕ್ರಮಿಸಿದವನು ಎಂದು. ಇದರ ಸೂಚಕತೆ ತಥಾಗತ ಎನ್ನುವುದು ಮನುಷ್ಯ ಗ್ರಹಿಸಬೇಕಾದ, ಅಂತರ್ಗತ ಮಾಡಿಕೊಳ್ಳಬೇಕಾದ ಮೂಲಭೂತ ವಾಸ್ತವಿಕತೆ; ದುಃಖದಿಂದ ಬಿಡುಗಡೆ ಪಡೆಯುವ ಸಾಮರ್ಥ್ಯ ಪ್ರತಿಯೊಬ್ಬನಲ್ಲಿಯೂ ಇದೆ; ಬುದ್ಧತ್ವ ಎಲ್ಲರಿಗೂ ಸಾಧ್ಯ ಎಂದು. ಇದು ಬುದ್ಧನ ಸ್ಪಷ್ಟ ನಿಲುವು ಆಗಿತ್ತು.

## ದುಃಖ ಆರ್ಯಸತ್ಯ

ಸಾಧ್ಯವಾದಷ್ಟು ಸುಖಾನುಭವದಲ್ಲಿಯೇ ಬದುಕನ್ನು ಕಳೆಯಬೇಕು ಎನ್ನುವ ಮೋಜು ಮಸ್ತಿಯ ಅತಿರೇಕತೆ ಒಂದು ಕಡೆ; ತಾವೇ ದುಃಖವನ್ನು ಹಾಸಿಕೊಂಡು ಹೊದ್ದುಕೊಂಡು ಬದುಕಿರುವ ಅತಿರೇಕತೆ ಇನ್ನೊಂದು ಕಡೆ ವಿಜೃಂಭಿಸುತ್ತಿದ್ದಾಗ ಬುದ್ಧ ಹೇಳಿದುದು ದುಃಖವೇ ಆರ್ಯಸತ್ಯ (ಪರಮ ಸತ್ಯ) ಎಂದು. ಅಕಾಲಿಕವಾಗಿ ಮರಣ ಹೊಂದಿದ ಮಗುವನ್ನು ಬದುಕಿಸಿಕೊಡು ಎಂದು ಬೇಡಿ ಬಂದವಳಿಗೆ ಕೊಟ್ಟದ್ದು ಸಾವು ಇರದ ಮನೆಯಿಂದ ಸಾಸಿವೆ ತರುವ ಓಡಾಟ. ಆದರೆ ಕರ್ನಾಟಕದ ಸನ್ನತಿಯವರೆಗೆ ಉತ್ತರ ದಕ್ಷಿಣ ಭಾರತವೆರಡನ್ನೂ ಕಾಲ್ನಡಿಗೆಯಲ್ಲಿ ಸಂಚರಿಸಿದ್ದ ಬುದ್ಧ ಬಯಸಿದುದು ಜನಸಾಮಾನ್ಯರ ಸುಂದರ ಬದುಕು. ಇವೆಲ್ಲಾ ಬುದ್ಧನ ಮಹಾಕರುಣೆಯಾಗಿ ಅರ್ಥಪೂರ್ಣವಾಗುವುದು ಹೇಗೆ? ಇದಕ್ಕೆ ಒಂದು ಉತ್ತರ ಅವನ ಕಾಲಘಟ್ಟದ ಪರಿಸ್ಥಿತಿ. ಬುದ್ಧನ ಕಾಲಘಟ್ಟದಲ್ಲಿ ಬುಡಕಟ್ಟುಗಳ ನಡುವೆ ವಿನಾಶಾತ್ಮಕವಾದ ಸಂಘರ್ಷ, ಬುಡಕಟ್ಟು ವ್ಯವಸ್ಥೆಯನ್ನೇ ನಾಶ ಮಾಡಲು ಪಣತೊಟ್ಟ ಬಲಿಷ್ಠರ ಸಾಮ್ರಾಜ್ಯ ಸ್ಥಾಪನೆ, ಪ್ರಭುತ್ವ ಶಕ್ತಿಗಳ ಉದಯ ಆಗುತ್ತಿತ್ತು. ಇದರಿಂದಾಗಿ ಅನಿಶ್ಚಿತತೆ, ಕ್ರೌರ್ಯ, ದುರಾಸೆಯೇ ಮೊದಲಾದ ಅಮಾನುಷ ಪಶು ಪ್ರವೃತ್ತಿಗಳು ಹಿಂದೆಂದೂ ಕಾಣದಂತಹ ರೀತಿಯಲ್ಲಿ ಕಾಣಲಾರಂಭಿಸಿದವು. ವೈಯಕ್ತಿಕ ಬದುಕು, ಸಾವು–ನೋವು, ದುಃಖ–ದುಗುಡ, ದುಮ್ಮಾನ, ಅತೃಪ್ತಿ, ಅಸಮಾಧಾನ, ಅಶಾಂತಿಗಳ ಬೀಡಾಯಿತು. ದುಃಖ ಸ್ಥಾಯೀಭಾವವಾಯಿತು.



ಸುಖದಲ್ಲಿ ಮುಳುಗಿ ತೇಲುವ ಮತ್ತು ದುಃಖದ ಸಮುದ್ರದಲ್ಲಿ ಬಿದ್ದೇಳುತ್ತಿರುವ ಅತಿರೇಕದ ಸ್ಥಿತಿಯಲ್ಲಿ ಇರುವವರಂತೆ ಬುದ್ಧನೂ ಸಹ ಬದುಕನ್ನು ಸಂಪೂರ್ಣವಾಗಿ ವೈಯಕ್ತಿಕ

ನೆಲೆಯಲ್ಲಿಯೇ ಅರ್ಥೈಸಿದ್ದ. ವೈಯಕ್ತಿಕವಾಗಿ ಸುಖವಾಗಿ ಇರಬೇಕು ಎಂದು ಎಷ್ಟು ಭಾವಿಸಿದರೂ ಸುಖಾನುಭವ ಕ್ಷಣಿಕ, ತಾತ್ಕಾಲಿಕ ಆಗಿರುವುದರಿಂದ ಸಹಜವಾಗಿ ಸುಖ ಕೈಜಾರುತ್ತದೆ, ಅದು ದುಃಖಕಾರಕ ಆಗುತ್ತದೆ; ಕಳೆದುಹೋದ ಸುಖದ ಹಂಬಲಿಕೆಯೇ ಅತಿಯಾದ ಆಸೆ, ಅದರ ಪರಿಣಾಮವೇ ದುಃಖ ಆಗಿರುವುದರಿಂದ ಸುಖಾನುಭವಗಳ ಬದುಕು ಎಂದಿಗೂ ಸಾರ್ಥಕ ಬದುಕು ಆಗಲಾರದು; ಬದುಕಿಗೆ ವೈಯಕ್ತಿಕ ಮತ್ತು ಸಾಮುದಾಯಿಕ, ಭೂತ ಮತ್ತು ಭವಿಷ್ಯತ್ತುಗಳ ಆಯಾಮ ಇದೆ; ಸುಖವಾಗಲೀ ದುಃಖವಾಗಲೀ ಒಂಟಿಯಲ್ಲ, ಅದು ಹಲವಾರು ಸಂಗತಿಗಳ ಕ್ರಿಯೆ ಪ್ರತಿಕ್ರಿಯೆಗಳ ಪರಿಣಾಮ; ದುಃಖವು ವರ್ತಮಾನದಲ್ಲಿ ಅನುಭವಕ್ಕೆ ಬರುತ್ತಿದ್ದರೂ ಅದು ಭೂತ ಭವಿಷ್ಯತ್ತುಗಳನ್ನು ಹೊಂದಿರುವ ಸರಪಳಿ ಎಂದಿದ್ದ ಬುದ್ಧ.

ಆದರೂ ಪ್ರೀತಿ ಸ್ನೇಹ ಔದಾರ್ಯ ಸಹಾನುಭೂತಿ ಸಹಿಷ್ಣುತೆಗಳಿಂದ ಸುತ್ತಲಿನ ಜೀವಿಗಳಿಗೆ ಉಪಕಾರಿಗಳಾದರೆ ವೈಯಕ್ತಿಕ ಬದುಕು ಸಾರ್ಥಕವಾಗುತ್ತದೆ; ದುಃಖ ವ್ಯಕ್ತಿಯ ನೆಲೆಯಿಂದಲೇ ಬೆಳೆ ಪಡೆಯುವುದು; ಅದರಿಂದ ಅದರ ನಿವಾರಣೆ ವ್ಯಕ್ತಿಯ ನೆಲೆಯಲ್ಲಿಯೇ ಇದೆ; ಅದು ಅವನ ಗ್ರಹಿಕೆ, ಗ್ರಹಿಕೆಗೆ ತಕ್ಕ ನಡೆಯನ್ನು ಆಧರಿಸಿರುತ್ತದೆ; ಯಾವುದೇ ನಿರೀಕ್ಷೆಯಿಲ್ಲದ ಸಮಾಧಾನ ಚಿತ್ತದಿಂದ ಸಮಾನತೆ, ಭ್ರಾತೃತ್ವ, ಸರಳತೆ, ಪ್ರಾಮಾಣಿಕತೆ, ಅವೈಯಕ್ತಿಕತೆಗಳನ್ನು ಎತ್ತಿ ಹಿಡಿಯುವ ಸಾಂಘಿಕ ಜೀವನವನ್ನು ನಡೆಸಿದರೆ ಖಂಡಿತವಾಗಿ ಬದುಕು ದುಃಖರಹಿತವಾಗುತ್ತದೆ  ಎಂದು ಜನರಿಗೆ ಮಾರ್ಗದರ್ಶನ ಮಾಡಿದ್ದ. ಈ ಮಾರ್ಗದಲ್ಲಿ ಪ್ರತಿಯೊಬ್ಬರೂ ಬುದ್ಧ ಆಗಬಲ್ಲರು ಎಂಬ ಭರವಸೆಯನ್ನು ಮೂಡಿಸಿದ್ದ. ಇದು ಬುದ್ಧನ ಕರುಣೆಯ ಪ್ರಾಥಮಿಕ ರೂಪ.

ಸಿದ್ಧಾರ್ಥ ರಾಜಕುಮಾರನಾಗಿದ್ದವನು. ದುಃಖಕಾರಕ ಸುಖಭೋಗಗಳನ್ನು ಬಿಟ್ಟು ತಪಸ್ಸು ಮಾಡಿದ. ಏಳು ದಿನಗಳ ಕಾಲ ನಿರಂತರವಾಗಿ ಧ್ಯಾನಮಗ್ನನಾಗಿ ಮನಗಂಡದ್ದೇ ದುಃಖದ ನಿವಾರಣೋಪಾಯ. ಇದನ್ನು ಕಂಡುಕೊಂಡು ಬುದ್ಧನಾಗಿದ್ದ. ಅವನ ಈ ಸಾಧನೆಯೇ ಬುದ್ಧತ್ವ. ದೈಹಿಕವಾಗಿ ನಿತ್ರಾಣ ಆಗುವವರೆಗೂ ಕಾಲ್ನಡಿಗೆಯಲ್ಲಿಯೇ ಓಡಾಡಿ, ಜನಸಾಮಾನ್ಯರೊಂದಿಗೆ ದೀರ್ಘಕಾಲ ಬೆರೆತು, ಅವರ ದುಃಖಕ್ಕೆ ಬಿಡುಗಡೆ ಇದೆ ಎಂಬ ಭರವಸೆಯನ್ನು ಮೂಡಿಸಿದ. ದುಃಖಕ್ಕೆ ಒಳಗಾದವರಿಗೆ ಅವನು ಅನುಕಂಪ ತೋರಿದುದೇ ಅವರಿಗೆ ದುಃಖದಿಂದ ಬಿಡುಗಡೆ ಇದೆ ಎಂಬ ಭರವಸೆ ಉಂಟಾಗಲು ಪ್ರೇರಕಶಕ್ತಿಯಾಯತು. ಇದು ಅವನ ಕರುಣೆಯ ಮಹಾಪೂರ.

ಅಂಗುತ್ತರ ನಿಕಾಯದಲ್ಲಿ ಬುದ್ಧ ''ಮಾತು, ನಡೆ, ಆಲೋಚನೆಗಳ ರೂಪದಲ್ಲಿ ವ್ಯಕ್ತವಾಗುವ ಇಚ್ಛೆಯೇ ಕರ್ಮ'' ಎಂದಿದ್ದಾನೆ. ''ಕರ್ಮದ ಬೀಜ ಇಚ್ಛೆ, ಅದನ್ನು ಬಿತ್ತಬೇಡಿ, ಬಿತ್ತಲು ಆಗದಂತೆ ನಾಶಮಾಡಿ. ಆಗ ಸ್ವಾರ್ಥಿ ಆಸೆಗಳು ಮೊಳೆಯುವುದಿಲ್ಲ'' ಎನ್ನುತ್ತದೆ ಸುತ್ತ ನಿಪಾತದ ರತನ ಸುತ್ತ. ''ಆಕಾಶದಲ್ಲಿಯಾಗಲೀ ಭೂಮಿಯಲ್ಲಾಗಲೀ ಅಂತರಿಕ್ಷದಲ್ಲಾಗಲೀ ಸಾಗರದ ಮಧ್ಯದಲ್ಲಾಗಲೀ ಕೆಟ್ಟ ಕ್ರಿಯೆಗಳ ದುಷ್ಪರಿಣಾಮದಿಂದ ಪಾರಾಗುವ ಸ್ಥಳ ಇಲ್ಲ'' ಎನ್ನುತ್ತದೆ ಧಮ್ಮಪದ. ಆದರೂ ಒಬ್ಬ ತನ್ನ ಹಿಂದಿನ ಎಲ್ಲಾ ಕರ್ಮಗಳ ಋಣಸಂದಾಯ ಮಾಡಬೇಕಿಲ್ಲ; ಕರ್ಮಫಲಗಳನ್ನೆಲ್ಲಾ ಅನುಭವಿಸಿಯೇ ತೀರಬೇಕಿಲ್ಲ ಎಂದ ಬುದ್ಧ. ''ಯಾರಾದರೂ ಕರ್ಮಕ್ಕೆ ತಕ್ಕ ಫಲವನ್ನು ಅನುಭವಿಸಲೇ ಬೇಕು ಎಂದರೆ ಧಾರ್ಮಿಕ ಬದುಕು ಎಂಬುದೂ ಇರುವುದಿಲ್ಲ ; ದುಃಖಕ್ಕೆ ಕೊನೆಯೂ ಇರುವುದಿಲ್ಲ'' ಎನ್ನುತ್ತದೆ ಅಂಗುತ್ತರ ನಿಕಾಯ. ಇದು ಬುದ್ಧ ಆಗುವ, ಬುದ್ಧತ್ವವನ್ನು ಪಡೆಯುವ ಪ್ರಕ್ರಿಯೆ ಮಾತ್ರವಲ್ಲ, ಒದ್ದಾಡುತ್ತಿರುವವರಿಗೆ ಬುದ್ಧ ಮತ್ತು ಬೌದ್ಧಧರ್ಮವು ತೋರುವ ಕರುಣೆಯ ರೀತಿಯೂ ಆಗಿದೆ.

## ಮಹಾಯಾನದ ಪುನರ್ಜನ್ಮ ಸಿದ್ಧಾಂತ

ಸುಖ ಇದ್ದರೂ ಕಲ್ಪಿತ ದುಃಖದಿಂದ ಕಳವಳಿಸುವ ಮನಸ್ಥಿತಿಯಿಂದಾಗಿ ಈ ಲೋಕದಲ್ಲಿ ಪುನಃ ಪುನಃ ಹುಟ್ಟುವಂತೆ ಮತ್ತು ಸಾಯುವಂತೆ ಮಾಡುವ ಕರ್ಮಗಳ ಫಲಗಳು ಸಂಗ್ರಹವಾಗುತ್ತಾ ಹೋಗುತ್ತವೆ. ಇದನ್ನು ತಿಳಿಯದವರು ಮರಣದ ನಂತರ ಭಯಾನಕ ಹಿಂಸೆಗೆ ಒಳಗಾಗುವ ನರಕವಾಸವನ್ನು ಪಡೆಯುತ್ತಾರೆ; ಅಥವಾ ಆಸೆಗಳು ಪೂರೈಸದ ಕಾರಣ ಅತೃಪ್ತಗೊಂಡು ಅಲೆದಾಡುವ ಪ್ರೇತಾವಸ್ಥೆಯನ್ನು ಹೊಂದುತ್ತಾರೆ; ಅಥವಾ ದೀರ್ಘಕಾಲ ಸುಖದಿಂದಿರುವ ಸ್ವರ್ಗವಾಸವನ್ನು ಅನುಭವಿಸುತ್ತಾರೆ; ಆನಂತರ ಕೇವಲ ವಿಷಯವಾಸನೆಗಳಿಗೆ ಅಧೀನವಾಗಿ ಬದುಕುವ ಪ್ರಾಣಿ ಜನ್ಮವನ್ನು, ಅಧಿಕಾರಕ್ಕಾಗಿ ಹಂಬಲಿಸುವ ದೇವತೆಯ ಜನ್ಮವನ್ನು ಅಥವಾ ವಿಷಯವಾಸನೆ ಮತ್ತು ತಾರ್ಕಿಕತೆಯಿರುವ ಮನುಷ್ಯ ಜನ್ಮವನ್ನು ಪಡೆದು ಜನ್ಮಾಂತರಗಳಲ್ಲಿ ತೊಳಲಾಡುತ್ತಾರೆ ಎಂದು ಬೌದ್ಧಧರ್ಮ ಪುನರ್ಜನ್ಮ ಸಿದ್ಧಾಂತದ ಮೂಲಕ ಪ್ರಾಪಂಚಿಕ ಜೀವನದಲ್ಲಿ ಕಂಡುಬರುವ ಸುಖ–ದುಃಖ–ರೂಪೀ ಅಸಮಾನತೆಯ ಕಾರಣವನ್ನು ವಿವರಿಸುತ್ತದೆ, ವೈಯಕ್ತಿಕ ದುಃಖದ ತೀವ್ರತೆಯನ್ನು ಕಡಿಮೆ ಮಾಡುತ್ತದೆ, ನಿಧಾನವಾಗಿ ದುಃಖರಹಿತ ಆಗುವ ನಿರ್ವಾಣದ ಹಂತವನ್ನು ತಲುಪಲು ಸಹಾಯ ಹಸ್ತ ಚಾಚುತ್ತದೆ.

## ಬುದ್ಧತ್ವ

ಅಪ್ರತಿಮ ಪರಿಶುದ್ಧ ಪ್ರಜ್ಞೆಯ ಮೂರ್ತರೂಪವೇ ಬುದ್ಧತ್ವ. ನಿರ್ಮಾಣಕಾಯ, ಸಂಭೋಗ ಕಾಯ, ಧರ್ಮಕಾಯ ಎನ್ನುವ ತ್ರಿಕಾಯಗಳೇ ಬುದ್ಧತ್ವದ ಸ್ವರೂಪ; ಕಾಲದೇಶಗಳಲ್ಲಿ ಪ್ರಕಟವಾದ ಬುದ್ಧ ಸ್ವರೂಪ ನಿರ್ಮಾಣ ಕಾಯವಾದರೆ, ವಸ್ತು ಮತ್ತು ವ್ಯಕ್ತಿಯ ನಡುವಿನ ಸಂಪರ್ಕದಿಂದ ಉಂಟಾಗುವ ಅನುಭವಗಳನ್ನೆಲ್ಲಾ ಸುಖಿಸುವ ಕಾಯ ಸಂಭೋಗಕಾಯ; ಮಿತಿರಹಿತ ಪರಿಧಿರಹಿತ ಜ್ಞಾನಬೋಧೆ–ಬೆಳಕಿನ ತತ್ತ್ವದ ಮೂರ್ತತೆಯೇ ಧರ್ಮಕಾಯ. ಪ್ರತಿಯೊಬ್ಬರಲ್ಲಿಯೂ ಅಂತರ್ಗತವಾಗಿರುವ ಈ ಸ್ವರೂಪವು ಸಂಪೂರ್ಣವಾಗಿ ಜಾಗೃತಗೊಳ್ಳುವುದೇ ಬುದ್ಧತ್ವ.

ಪ್ರಾಚೀನ ಬೌದ್ಧಧರ್ಮವು ವ್ಯಕ್ತಿಯ ಪ್ರಜ್ಞೆಯನ್ನು ಅದರ ಸಾರವಾಗಿ ಇರುವ ಸಂಕುಚಿತ ಆಲೋಚನೆ, ಭಾವನೆ, ಕ್ರಿಯೆಗಳ ಭಾವರೂಪಗಳನ್ನು ಹೊರಹಾಕಿ ಶೂನ್ಯವಾಗಿಸುವುದು, ಆ ಮೂಲಕ ವೈಯಕ್ತಿಕ ಮಿತಿಗಳನ್ನು ಮೀರುವುದು ಎಂದು ಬುದ್ಧತ್ವವನ್ನು ಪರಿಕಲ್ಪಿಸಿತ್ತು. ಮಹಾಯಾನ ಬೌದ್ಧಧರ್ಮವು ನಿಷ್ಕಳಂಕ ಪ್ರಜ್ಞೆ, ಶೂನ್ಯತೆಗಳೆರಡರ ಸಂಗಮವೇ ಪರಮಸತ್ಯ; ಹೃದ್ಗತವಾಗುವ ಈ ಪರಮಸತ್ಯದ ಬೋಧೆಯೇ ಒಬ್ಬನ ನಿರ್ವಾಣ ಎಂದಿತು, ಪ್ರಜ್ಞೆಯಲ್ಲಿರುವ ಎಲ್ಲ ಸಂಗತಿಗಳನ್ನು ಬರಿದುಗೊಳಿಸುವ ಪ್ರಕ್ರಿಯೆಯನ್ನು ವಸ್ತುನಿಷ್ಠ ವಾಸ್ತವತೆಯನ್ನಾಗಿಸಿತು. ಹೀನಯಾನ ಬೌದ್ಧ ಧರ್ಮವು ಶುದ್ಧಪ್ರಜ್ಞೆಯ ಧರ್ಮಕಾಯನಾದ ಬುದ್ಧನೇ ಶಾಸ್ತ=ಶಾಸನ=ಧರ್ಮ=ನಿತ್ಯಸತ್ಯ; ಬುದ್ಧ ಪಡೆದ ಪರಮ ಬೋಧೆಯ ಪ್ರತೀಕ ಅವನ ನಡೆ ನುಡಿ; ಅವೇ ಅವನ ಭೌತಿಕ ಮತ್ತು ಮನೋಕಾಯಗಳಾದ ಸಂಭೋಗ ಕಾಯ; ಅವೇ ಅವನ ಧರ್ಮಶಾಸನ ಮತ್ತೆ ಧರ್ಮಕಾಯ ಎಂದು ಸಾರಿತು.

ಇಂಥ ಪರಿಕಲ್ಪನೆಯ ಬುದ್ಧ ಮತ್ತು ಬುದ್ಧತ್ವ ಲೌಕಿಕ ಪ್ರಪಂಚದಲ್ಲಿ ಮಾತ್ರವಲ್ಲದೆ ಅಲೌಕಿಕ ಪ್ರಪಂಚದಲ್ಲಿಯೂ ಸಹಜವಾಗಿ ಬಹುರೂಪಿ ಆಗಿರುವುದು ಮಾತ್ರವಲ್ಲದೆ, ಬುದ್ಧ ಮತ್ತು ಬುದ್ಧತ್ವದ ಕಾರುಣ್ಯ ಲೋಕಾಲೋಕಗಳನ್ನು ಒಳಗೊಳ್ಳುವ ನಿತ್ಯ ಸತ್ಯವೂ ಆಗುತ್ತದೆ.

## ಬೋಧಿಸತ್ವ

ಎಲ್ಲರಿಗೂ ಸೂಕ್ತ ಬೋಧನೆಯನ್ನು ಮಾಡಿ ಪರಿನಿರ್ವಾಣ ಹೊಂದಿದ್ದ ಬುದ್ಧನ ದೈಹಿಕ ಮರಣದೊಂದಿಗೆ ಅವನ ಬೋಧೆಯೂ ಇಲ್ಲವಾಗುತ್ತದೆ ಎಂದರೆ ಆ ಕರುಣೆಗೆ ಯಾವ ಅರ್ಥವೂ ಇಲ್ಲ ಎನ್ನುವ ಗ್ರಹಿಕೆಯನ್ನು ಹೊಂದಿದ ಮಹಾಯಾನ ಬೌದ್ಧ ಧರ್ಮವು ಬುದ್ಧನ ಕಾರುಣ್ಯವನ್ನು ವ್ಯಕ್ತಿಯು ತನ್ನ ಜೀವನದಲ್ಲಿಯ ಅಸ್ತಿತ್ವಸಂಬಂಧೀ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಒಂದು ಜೀವನಪಥವನ್ನಾಗಿಸಿತು, ನಿತ್ಯಸತ್ಯವಾಗಿಸಿತು. ಮಹಾಯಾನ ಬೌದ್ಧದರ್ಮದಲ್ಲಿ ಬೋಧಿಸತ್ವನಿಗೆ ಪ್ರಥಮ ಆದ್ಯತೆ. ಬುದ್ಧನಾಗುವ ಹಂತವನ್ನು ಸಂಪೂರ್ಣವಾಗಿ ತಲುಪಿರುವವನೇ ಬೋಧಿಸತ್ವ. ಇವನು ಅಧ್ಯಯನ, ಮನನ ಮತ್ತು ಧ್ಯಾನಗಳಿಂದ ಎಲ್ಲದರ ಶೂನ್ಯತೆಯನ್ನು ಮನಗಂಡಾಗ ಉಂಟಾಗುವ ಅರಿವಿನ, ಪ್ರಜ್ಞೆಯ ಮೂರ್ತರೂಪ. ಈ ಪ್ರಪಂಚದಲ್ಲಿ ಪರಿಶ್ರಮದಿಂದ ದುಃಖದಿಂದ ಬಿಡುಗಡೆಯನ್ನು ತನಗಾಗಿ ಕಂಡುಕೊಂಡವನು ಮತ್ತು ಇತರರೂ ಆ ಮಾರ್ಗದಲ್ಲಿ ದುಃಖದಿಂದ ಬಿಡುಗಡೆ ಪಡೆಯಬಹುದು ಎಂದು ತೋರಿದ ಬುದ್ಧ ಎಲ್ಲಾ ಕಾಲದಲ್ಲೂ ಬಿಡುಗಡೆಯ ಮಾರ್ಗ ತೋರಲು ಈ ಪ್ರಪಂಚದಲ್ಲಿ ಯಾವಾಗಲೂ ಬೋಧಿಸತ್ವನಾಗಿ ಹುಟ್ಟಿಬರುತ್ತಲೇ ಇರುತ್ತಾನೆ. ಏಕೆಂದರೆ ಒಬ್ಬ ತನಗಾಗಿ ಬುದ್ಧತ್ವವನ್ನು ಪಡೆಯುವ ಉದ್ದೇಶವನ್ನು ಮಾತ್ರ ಹೊಂದಿದ್ದರೆ ಅದು ಒಂದರ್ಥದಲ್ಲಿ ಸಂಕುಚಿತವಾದ ಆಶಯವುಳ್ಳದ್ದು.

ಬೋಧಿಸತ್ವನು ಎಲ್ಲರನ್ನೂ ತನ್ನೊಂದಿಗೆ ನಿರ್ವಾಣ ಪಡೆಯುವ ಮಟ್ಟಕ್ಕೆ ಏರಿಸುವ ಔದಾರ್ಯ ಅನುಕಂಪ ಸಹಾನುಭೂತಿ ಹೊಂದಿರುವ, ಅಧೋಗತಿಯಲ್ಲಿ ಇರುವವರಿಗೂ ಸಹಾಯ ಹಸ್ತ ಚಾಚುತ್ತಲೇ ಇರುವ ಮಹಾಕರುಣಿ. ಬೋಧಿಸತ್ವ-ಬುದ್ಧನ ಈ ಆಶಯಸ್ವರೂಪ ಸಾಂಸಾರಿಕರ ಉದ್ಧಾರದ ದೃಷ್ಟಿಯಿಂದ ಸರ್ವಶ್ರೇಷ್ಠವಾದದ್ದು ಎನ್ನುವ ನಿಲುವು ಮಹಾಯಾನ ಬೌದ್ಧ ಧರ್ಮದ್ದು. ತನ್ನ ದೈಹಿಕ ಮರಣದ ನಂತರವೂ ಜೀವಿಗಳ ಮೇಲಿನ ಕರುಣೆ ಮತ್ತು ಅನುಕಂಪೆಯಿಂದ ಅವುಗಳ ಉದ್ಧಾರಕ್ಕಾಗಿ ಕ್ರಿಯಾಶೀಲನಾಗಿರುವ ಬುದ್ಧ ತನ್ನನ್ನು ವೈರೋಚನ, ಅಕ್ಷೋಭ್ಯ, ರತ್ನಸಂಭವ, ಅಮಿತಾಭ ಮತ್ತು ಅಮೋಘಸಿದ್ಧಿ ಎಂಬ ಐದು ಬೋಧಿಸತ್ವರ ರೂಪಗಳಲ್ಲಿ ಅನೇಕ ಆಗಿಸಿಕೊಳ್ಳುತ್ತಲೇ ಇರುತ್ತಾನೆ ಎನ್ನುತ್ತದೆ ಮಹಾಯಾನ ಬೌದ್ಧಧರ್ಮ.

## ಧ್ಯಾನಿಬುದ್ಧರು

ಮಹಾಯಾನ ಬೌದ್ಧಧರ್ಮವು ಗುರುತಿಸುವ ಬೋಧಿಸತ್ವರನ್ನು ವಜ್ರಯಾನ ಬೌದ್ಧಧರ್ಮವು ವೈಯಕ್ತಿಕ ದೌರ್ಬಲ್ಯಗಳನ್ನು ಮೆಟ್ಟುವುದಕ್ಕಿಂತ ಅವುಗಳನ್ನೇ ತಮ್ಮ ಶಕ್ತಿಯನ್ನಾಗಿಸಿಕೊಂಡಿರುವ ಧ್ಯಾನಿಬುದ್ಧರು ಎನ್ನುತ್ತದೆ. ಇವರು ಜ್ಞಾನಬೋಧೆಯ, ಉದ್ಬೋಧಿತ ಪ್ರಜ್ಞೆಯ, ಧರ್ಮಕಾಯದ ಐದು ವಿಭಿನ್ನ ಅಂಶಗಳನ್ನು ಪ್ರತಿನಿಧಿಸುತ್ತಾರೆ. ಈ ಐದು ಬುದ್ಧರು ಭ್ರಮೆಗಳಾಗಿ ಕಾಡುವ ನಮ್ಮ ಮಾನಸಿಕ ಸ್ಥಿತಿಗಳಾದ ಜಂಬ, ಹಮ್ಮುಬಿಮ್ಮು, ಕೋಪ, ಮಾತ್ಸರ್ಯ, ವ್ಯಾಮೋಹ, ಅಜ್ಞಾನಗಳ ಬಂಧನದಿಂದ ಪಾರಾದ ವ್ಯಕ್ತಿತ್ವದ ಮಾದರಿಗಳು. ತನ್ನ ಸಾಧನೆಯಿಂದ ಬುದ್ಧನಾದ ಸಿದ್ಧಾರ್ಥ ಐತಿಹಾಸಿಕ ಪುರುಷೋತ್ತಮ ಆಗಿದ್ದರೆ ಇವರು ನಮ್ಮಂತೆಯೇ ಇದ್ದು ಬೆಳೆಯುತ್ತಾ ಹೋದ ನಮ್ಮ ಸಮಕಾಲೀನ ಮಾರ್ಗದರ್ಶಿ ಸಾಧಕರು, ಬುದ್ಧ-ಸ್ವರೂಪಿಗಳು, ಇವರು ನಮಗಿಂತ ಭಿನ್ನವಾದ ಅವರದೇ ಆದ ಲೋಕದಲ್ಲಿ ಇದ್ದರೂ ನಮ್ಮನ್ನು ತಮ್ಮ ಮಾರ್ಗದಲ್ಲಿ ಕರೆದೊಯ್ಯುವ ಕರುಣಾಮೂರ್ತಿಗಳು.

**ವೈರೋಚನ ಬುದ್ಧ:** ವೈರೋಚನ ಬುದ್ಧ ಸೃಷ್ಟಿಯಾದ ಮತ್ತು ಸೃಷ್ಟಿಯಾಗದ ಎಲ್ಲ ಚರಾಚರಗಳನ್ನೂ ಒಳಗೊಳ್ಳುವ, ಅಡಕವಾಗಿಸಿಕೊಳ್ಳುವ ಆಕಾಶ ತತ್ವ, ಧರ್ಮಧಾತು-ವಿವೇಕ; ಎಲ್ಲದರ ಶೂನ್ಯತೆಯ ಪ್ರತಿಪಾದಕ ಧರ್ಮಕಾಯದ ಮೂರ್ತರೂಪ. ಇವನ ಕ್ಷೇತ್ರ ಅಗಣಿತ ಜ್ಞಾನವ್ಯೂಹ.

**ಅಕ್ಷೋಭ್ಯ ಬುದ್ಧ:** ಅಜ್ಞಾನ ಮತ್ತು ಭ್ರಾಂತಿಗಳನ್ನು ನಿರ್ಮೂಲನ ಮಾಡುವ ಅಕ್ಷೋಭ್ಯ ಬುದ್ಧನು ಎಂದೂ ಹಸಿವಿನ ಸಂವೇದನೆ ಹೊಂದುವುದಿಲ್ಲ, ಯಾರ ಬಗ್ಗೆಯೂ ಜುಗುಪ್ಸೆ ಪಡುವುದಿಲ್ಲ ಎಂಬ ವ್ರತಧಾರಿಯಾಗಿ ಹಸಿವು, ಜುಗುಪ್ಸೆಯನ್ನು ಗೆದ್ದವನು. ದಾಳಿಕೋರತನವನ್ನು ಮಣಿಸುವ ಪುನರ್ಪರಿಶೀಲನಾ ವಿವೇಕಿ, ಅದ್ವಯ ಪ್ರಜ್ಞೆ ಹಾಗೂ ಸಮಾಧಾನಿ ಚಿತ್ತದ ವಿನಯದ ಮೂರ್ತಿಯಾದ ಅಕ್ಷೋಭ್ಯ ಬುದ್ಧ ಜಲತತ್ವ. ಅವನ ಕ್ಷೇತ್ರ ಅಭಿರತಿ ನಂದನವನ.

**ಅಮಿತಾಭ ಬುದ್ಧ:** ಅಮಿತಾಭ ಬುದ್ಧನ ಕ್ಷೇತ್ರ, ಶುದ್ಧಭೂಮಿಯಾದ ಸುಖವತಿ ನಂದನವನ. ಅಮಿತಾಭನು ದಯೆ, ಕೋಮಲತೆ, ಪರಿಶುದ್ಧತೆ ಮತ್ತು ವಿವೇಕಗಳ ಪ್ರತೀಕವಾದ ಅಗ್ನಿ ತತ್ತ್ವ. ಶೋಧನೆ, ಇಂದ್ರಿಯಗ್ರಹಿಕೆ ಮತ್ತು ಧ್ಯಾನಗಳಿಗೆ; ಆಸೆ ಪಿಪಾಸೆ ಪ್ರಬಲಾಕರ್ಷಣೆ ಸ್ವಾರ್ಥಗಳ ಮಣಿಸುವಿಕೆ; ಮತ್ತು ವಿವೇಚನಾ ಪ್ರಜ್ಞೆ, ಶುದ್ಧಗ್ರಹಿಕೆಗಳಿಗೆ ಮೂರ್ತರೂಪ.

**ಅಮೋಘಸಿದ್ಧಿ ಬುದ್ಧ:** ಹೊಟ್ಟೆಕಿಚ್ಚು ಮತ್ತು ಮಾತ್ಸರ್ಯಗಳನ್ನು ಮೂಲೋತ್ಪಾಟನ ಮಾಡುವ ಅಮೋಘಸಿದ್ಧಿ ಬುದ್ಧನು ಎಲ್ಲಾ ಮಾನಸಿಕ ರೂಪ-ಪರಿಕಲ್ಪನೆ, ಸೋಲಿಲ್ಲದ ಯಶಸ್ಸು ಮತ್ತು ಸಾಧನಾಸಿದ್ಧಿಗಳ ಪ್ರತೀಕವಾದ ವಾಯುತತ್ತ್ವ. ಇವನ ಕ್ಷೇತ್ರ ಪ್ರಕುತ ನಂದನವನ.

**ರತ್ನಸಂಭವ ಬುದ್ಧ:** ಸಮಚಿತ್ತ ಮತ್ತು ಸರ್ವತ್ಯಾಗಗಳ ಮೂರ್ತಿಯಾದ ರತ್ನಸಂಭವ ಬುದ್ಧ ಎಲ್ಲವನ್ನೂ ಶ್ರೀಮಂತಗೊಳಿಸುವ ಮತ್ತು ವೃದ್ಧಿಸುವ ಅಹಂಕಾರ ಹಾಗೂ ದುರಾಸೆಗಳನ್ನು ಮಣಿಸುವ ಪೃಥ್ವಿ ತತ್ತ್ವದ ಪ್ರತೀಕ. ಅವನ ಕ್ಷೇತ್ರ ಶ್ರೀಮತ್ ನಂದನವನ.

ಈ ಧ್ಯಾನಿಬುದ್ಧರು ಮರಣಾನಂತರ ಜೀವ ಪ್ರವೇಶಿಸುವ ಅಲೋಕದ ಬೇರೆ ಬೇರೆ ವಿಭಾಗಗಳ ಕ್ಷೇತ್ರಗಳಲ್ಲಿ ಇರುವವರು. ಬೌದ್ಧಧರ್ಮ ಈ ಅಲೋಕವನ್ನು ಬಾರ್ಡೋ ಎಂದು ಕರೆಯುತ್ತದೆ.

## ಬಾರ್ಡೋದಲ್ಲಿಯ ಮೂರು ಗತಿಗಳು

ಪರಮವಾಸ್ತವತೆಯಾದ ನಿಷ್ಕಳಂಕ ಪ್ರಜ್ಞೆ-ಶೂನ್ಯತೆಯು ಬೆಳಕಾಗಿ ಪ್ರತಿಯೊಬ್ಬನಿಗೂ ಮರಣಪೂರ್ವದಲ್ಲಿ ಕ್ಷಣಕಾಲ ಮತ್ತು ಮರಣಾನಂತರದಲ್ಲಿ ಒಂದು ತುತ್ತು ಊಟಮಾಡುವಷ್ಟು ಸಮಯ ನೇರವಾಗಿ ಅನುಭವಕ್ಕೆ ಬರುತ್ತದೆ. ಆ ಅವಧಿಯಲ್ಲಿ ಅವನಿಗೆ ಯಾವುದೇ ಕರ್ಮ ಸಂಬಂಧೀ ಭ್ರಮೆಗಳೂ ಇರುವುದಿಲ್ಲ, ಭಯಕಾರಕ ಅನುಭವಗಳೂ ಇರುವುದಿಲ್ಲ. ಅವನು ಮಾಡಬೇಕಾದದ್ದು ಈ ಬೆಳಕಿನಲ್ಲಿ ತನ್ನನ್ನು ವಿಲೀನಗೊಳಿಸಿಕೊಳ್ಳುವುದು ಮತ್ತು ಅದಕ್ಕಾಗಿ ಧ್ಯಾನಿಬುದ್ಧನನ್ನು ಕುರಿತು ಧ್ಯಾನ ಮಾಡುವುದು ಎನ್ನುತ್ತದೆ ಮಹಾಯಾನ-ವಜ್ರಯಾನ. ಒಬ್ಬ ಮರಣ ಹೊಂದಿ ಇನ್ನೊಂದು ಜನ್ಮ ಪಡೆಯಲು ಬೇಕಾಗುವ ೪೯ ದಿನಗಳ ಅವಧಿಯ ಮೊದಲ ಹಂತದಲ್ಲಿ ಅವನು ತಾನು ಸತ್ತೇ ಹೋಗಿದ್ದೇನೆ ಎನ್ನುವ ಪ್ರಜ್ಞೆಯನ್ನು ಹೊಂದಿರುತ್ತಾನೆ. ತಾನು ಅದುವರೆವಿಗೆ ಬದುಕಿದ ರೀತಿಯನ್ನೆಲ್ಲಾ ಅವಲೋಕಿಸಬಲ್ಲವನಾಗಿರುತ್ತಾನೆ. ಅವನೇನಾದರೂ ತಾನು ಉದ್ಧಾರವಾಗುವ ಬುದ್ಧತ್ವದ ಬೆಳಕಿನ ಪಥದಲ್ಲಿ ಮುಂದುವರೆಯುವುದನ್ನು ಆಯ್ಕೆ ಮಾಡಿಕೊಂಡರೆ ಆ ಪರಿಶುದ್ಧ ಅಕಳಂಕ ಶೂನ್ಯ ಪ್ರಜ್ಞಾ- ಬೆಳಕಿನಲ್ಲಿ ಲೀನವಾಗುತ್ತಾನೆ, ಮುಕ್ತನಾಗುತ್ತಾನೆ. ಇದು ಮೊದಲನೆಯ ಹಂತ.

ಇದು ಸಾಧ್ಯವಾಗದಿದ್ದರೆ ಅವನು ಗೊಂದಲದಿಂದ ಕೂಡಿರುವ ಪ್ರಜ್ಞೆಯನ್ನು ಹೊಂದುತ್ತಾನೆ. ಇದೇ ಎರಡನೆಯ ಹಂತ. ಇಲ್ಲಿ ಸರಿಯಾದ ಪಥವನ್ನು ಆಯ್ಕೆ ಮಾಡಿಕೊಳ್ಳಲು ಕರುಣಾಳು ಬುದ್ಧರೂಪಿಗಳು ಸಹಾಯ ಹಸ್ತವನ್ನು ಚಾಚುತ್ತಾರೆ. ಆದರೂ ಅವನಿಗೆ ತನ್ನ ಉದ್ಧಾರದ ಪಥವನ್ನು ಗುರುತಿಸಿಕೊಳ್ಳಲು ಮತ್ತು ಅದರಲ್ಲಿ ಮುಂದುವರೆಯುವ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ ಎಂದಾದರೆ ಈ ಪ್ರಪಂಚದಲ್ಲಿ ಪುನರ್ಜನ್ಮ ಪಡೆಯುವ ಅನಿವಾರ್ಯತೆಯೇ ಮೂರನೆಯ ಹಂತ. ಇವುಗಳನ್ನು 'ಟಿಬೇಟಿಯನ್ ಬುಕ್ ಆಫ್ ಡೆಡ್' ಬಾರ್ಡೋದಲ್ಲಿಯ ಮೂರು ಗತಿಗಳು ಎನ್ನುತ್ತದೆ.

## ಟಿಬೆಟಿಯನ್ ಬುಕ್ ಆಫ್ ಡೆಡ್ - ಕಾರುಣ್ಯದ ಬೆಳಕು

ಮಹಾಯಾನ ಬೌದ್ಧಧರ್ಮವು ವ್ಯಕ್ತಿಯೊಬ್ಬ ಬುದ್ಧತ್ವ-ಸಿದ್ಧಿಯನ್ನು ಪಡೆಯದೆ ಮೃತನಾದರೂ ಬುದ್ಧನ ಧರ್ಮಕಾಯದೊಂದಿಗೆ ಸಂಯೋಗಗೊಳ್ಳುವ ಅವಕಾಶ ಅವನಿಗೆ ಸಹಜವಾಗಿ ಇರುತ್ತದೆ ಎಂದು ನಂಬುತ್ತದೆ. ಮರಣ ಸನ್ನಿಹಿತವಾದ ಕ್ಷಣದಲ್ಲಿ, ಆಗ ಸಾಧ್ಯವಾಗದಿದ್ದರೆ ಮರಣಾನಂತರದ ೪೯ ದಿನಗಳಲ್ಲಿ ಧ್ಯಾನಿ ಬುದ್ಧರ ಬೆಳಕಿನ ಪಥವನ್ನು ಅಪ್ಪಿ, ಒಪ್ಪಿ ಒಂದಲ್ಲ ಒಂದು ಬುದ್ಧನಲ್ಲಿ ತನ್ನನ್ನು ವಿಲೀನವಾಗಿಸಿಕೊಳ್ಳಬಹುದು, ಆ ಬುದ್ಧನ ಕ್ಷೇತ್ರದಲ್ಲಿ ಸಾಧನೆ ಮಾಡಿ ಬುದ್ಧತ್ವವನ್ನು ಪಡೆಯಬಹುದು ಎನ್ನುತ್ತದೆ. ಪುನರ್ಜನ್ಮವನ್ನು ಪಡೆಯುವ ಪೂರ್ವದಲ್ಲಿ ಇದ್ದ ಜನ್ಮದ ಕಾರಣದಿಂದಾಗಿ ಉಂಟಾಗುವ ದುಃಖಕ್ಕೆ ಬದುಕಿದ್ದಾಗ ಪರಿಹಾರ ದೊರಕದಿರಬಹುದು ಅಥವಾ ಕಂಡುಕೊಳ್ಳದಿರಬಹುದು; ಆದರೂ ಸತ್ತನಂತರವೂ ಪರಿಹಾರವನ್ನು ಕಂಡುಕೊಳ್ಳುವ ಸಾಧ್ಯತೆ ಮರಣ ಹೊಂದಿದವರಿಗೆ ಇದೆ ಎನ್ನುತ್ತದೆ, ಈಗಲೂ ಬೌದ್ಧಧರ್ಮೀಯ ಆಚಾರದ ಭಾಗವಾಗಿರುವ 'ಟಿಬೆಟಿಯನ್ ಬುಕ್ ಆಫ್ ಡೆಡ್.'

'ಟಿಬೆಟಿಯನ್ ಬುಕ್ ಆಫ್ ಡೆಡ್' ಪುಸ್ತಕವನ್ನು ಇನ್ನೇನು ಸತ್ತುಹೋಗುತ್ತಾನೆ ಎನ್ನುವ ಸಮಯದಲ್ಲಿ ಧಾರ್ಮಿಕ ವ್ಯಕ್ತಿ ಮರಣಶಯ್ಯೆಯಲ್ಲಿರುವ ವ್ಯಕ್ತಿಯ ಕಿವಿಗೆ ಕೇಳುವಂತೆ ಓದುತ್ತಾರೆ. ಇದರ ಉದ್ದೇಶ ಬದುಕಿದ್ದಾಗ ಸದ್ಗತಿ ಕೊಡುವ ಧಾರ್ಮಿಕ ಜೀವನಕ್ಕೆ ಸರಿಯಾಗಿ ಗಮನ ಕೊಡದಿದ್ದರೂ ಸಾಯುವ ಕಾಲದಲ್ಲಾದರೂ ವ್ಯಕ್ತಿ ಗಮನ ಕೊಡುತ್ತಾನೆ ಅಥವಾ ಸತ್ತ ನಂತರವಾದರೂ ಕೊಡುತ್ತಾನೆ; ಬದುಕಿದ್ದಾಗ ಸಾಧನೆ ಮಾಡಿ ಬುದ್ಧತ್ವವನ್ನು ಪಡೆಯದಿದ್ದರೂ ಸತ್ತನಂತರ ತೋರಿಬರುವ ಮುಕ್ತಿಕಾರಕ ಬೆಳಕಿನ ಪಥವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ; ಮಾಡಿಕೊಂಡು ಸಾಧನೆ ಮಾಡದಿದ್ದರೂ ಮುಂದಿನ ಜನ್ಮದಲ್ಲಿ ಧಾರ್ಮಿಕ ಜೀವನವನ್ನು ನಡೆಸುವ ಮನಸ್ಸನ್ನಾದರೂ ಸಂಸ್ಕಾರವನ್ನಾಗಿ ಹೊಂದುತ್ತಾನೆ ಎನ್ನುವ ಭರವಸೆಯನ್ನು ಸಾಯುತ್ತಿರುವ ವ್ಯಕ್ತಿಗೆ ಕೊಡುವುದು. ಈ ವಿಶ್ವಾಸವು ಭರವಸೆ ದಾರಿ ತಪ್ಪಿರುವವರ ಬಗೆಗಿನ ಅಪಾರವಾದ ಕರುಣೆಯ ಪ್ರತೀಕ. *(ಮುಂದಿನ ಸಂಚಿಕೆಗೆ)*